ಆ ಪ್ರಶ್ನೆಗೆ ಆಕೀ ಹತ್ರ ಜವಾಬು ಇರಲಿಲ್ಲ. ಸುಮ್ಮನೆ ನಿಂತಗಂಡಿದ್ಲು. ಕಣ್ಣೀರಿನ್ಯಾಗ ತೊಯ್ದ ಆಕೀ ಕಪಾಳ ಇನ್ನಾ ಹಸಿಯಾಗೇ ಇತ್ತು. ಸ್ವಲ್ಪ ಹೊತ್ತಿನ ಕೆಳಗ ತಾನು ಆಕೀನ ನೋಡಿದ ನೋಟ ಮತ್ತು ಈಗ ತಾನು ಆಕೀನ ನೋಡ್ತಿರಾ ದೃಷ್ಟಿ ಬ್ಯಾರೆ ಬ್ಯಾರೆ ಅಂತ ಅನಸಾಕ ಶುರುವಾಯ್ತು. ತಾನು ಸಣ್ಣವನಿದ್ದಾಗ ಕೈ ಮತ್ತು ಹಣೆಗೆ ಬ್ಯಾಂಡೇಜು ಕಟಿಗೆಂಡು ಮಂಚದ ಮ್ಯಾಗ ಕುಂತಿದ್ದ ಅಕ್ಕನ ಮುಖ ನೋಡಿದಂಗಾಯ್ತು. ಹಿಂದಿನ ದಿನಾನೇ ಗಂಡನ ಮನೆಯಿಂದ ಬಂದಿದ್ಲು ಆಕೆ. ಗಾಯಪಟ್ಟಿ ಮ್ಯಾಲೆ ಸೋರಿದ ರಕ್ತ ಒಣಗಿ ಅಂಜಿಕೆ ಹುಟ್ಟಿಸಂಗಿತ್ತು. ಮಂಚದ ಮ್ಯಾಗಿಂದ ಎದ್ದು ಅದರ ಕೆಳಗಿದ್ದ ಹಿತ್ತಾಳೆ ತಂಬಿಗೆ ಹೊರಗೆ ತೆಗೆದಾಗ ಆಕೆ ಆಡಿದ್ದು ಮೂರೇ ಮಾತು,

''ಇನ್ ನನ್ ಕೈಲಿ ಆಗಂಗಿಲ್ಲ. ನೀನು ಛೊಲೋ ಓದಿಕ್ಯಾ... ಅಪ್ಪ ಅಮ್ಮನ್ನ ಛೊಲೋ ನೋಡಿಕ್ಯಾ...''

''ಏನಕ್ಕಾ ಅದು?'' ಅಂತ ತಾನು ಕೇಳಾದರಾಗ ಆಕೆ ಆ ತೆಂಬಿಗ್ಯಾಗ ಇರಾದನ್ನ ಕಂಠಮಟ ಕುಡ್ದು ಬುಟ್ಟಿದ್ಲು. ಹಂಗೇ ತನ್ನ ಅಪ್ಪಿಗೆಂಡು ಜೀವ ಬಿಟ್ಟಿದ್ಲು.

ಹಳೇ ನೆನಪಿನಿಂದ ಹೊರಗ ಬರೋ ಹೊತ್ತಿಗೆ, ಪದ್ಮ ಅಲ್ಲಿಂದ ಹೋಗಿ ಬಿಟ್ಟಿದ್ಲು. ಯಾವಾಗಿನಂಗ ಮುಂದಿನ ಕುರ್ಚಿ ಮ್ಯಾಗ ಕಾಲು ಚಾಚಿ ಕುಂತುಗಂಡ. ಈ ಸಲ ಯಾಕೋ ಬೇವಿನ ಗಾಳಿಯ ಜತೆ ಮೂಗಿನ್ಯಾಗ ವಿರುಪಾಪುರ ಗಡ್ಡಿಯ ವಾಸನೆ ಹೊಡ್ಯಾಕತ್ಯಾದೇನೋ ಅನಸಾಕ ಶುರುವಾಯ್ತು.

ಒಂದೇ ಸಮ ಜಿಟಿ ಜಿಟಿ ಮಳೆ ಹತ್ತಿಗೆಂಡು ಐದಾರು ದಿನ ಆಗಿತ್ತು. ಶಿವಮೊಗ್ಗ ಕಡೆ ವಿಪರೀತ ಮಳೆ ಆಗಿ ಹೊಸಪೇಟೆ ಡ್ಯಾಮು ತುಂಬಾಕತ್ಯಾದ ಅಂತ ಸುದ್ದಿ ಬಂದಿತ್ತು. ಮಳೆ ಹಿಂಗೇ ಹೊಡದ್ರ ಇವತ್ತು ನಾಳೆರಾಗ ಡ್ಯಾಮಿನಾಗ ನೀರು ಬುಡ್ತಾರ ಅಂತ ಮನಸಿನ್ಯಾಗೆ ಅನುಕಂಡ ರೆಡ್ಡಿ. ಕೆಲಸದ ನಡುವ ಒಂದೆರಡು ಸಲ ಪದ್ಮ ನೆನಪಾದ್ಲು. ಹೋದಮ್ಯಾಗ ಫೋನ್ ಮಾಡ್ತೀನಿ ಅಂದವ್ಳು ಫೋನೇ ಮಾಡ್ಲಿಲ್ಲ. ವಿರುಪಾಪುರ ಗಡ್ಡಿಗೆ ಹೋದ್ಲಾ... ಮತ್ತೆ ಗೋವಾಕ್ಕ ಓಡಿ ಹೋದ್ಲಾ ಅಂತ ಪೊಲೀಸ್ ಅನುಮಾನ ಶುರುವಾಯ್ತು ಆತಗ.

ಎರಡು ದಿನ ಆದಮ್ಯಾಲೆ ರಾತ್ರಿ ಹತ್ತು ಗಂಟೆ ಸುಮಾರು ಫೋನು ಬಂತು. ಪದ್ಮ ಅನ್ನಾ ಹೆಸರು ನೋಡಿ ಪಟಕ್ಕಂತ ''ಹಲ್ಲೋ'' ಅಂದ ರೆಡ್ಡಿ.

''ಹಲೋ ಸರ್... ನಾನು.''

''ಗೊತ್ತಾಯ್ತು ಹೇಳು. ಎಲ್ಲಿದೀ?''

''ವಿರುಪಾಪುರ ಗಡ್ಯಾಗ ಅದೀನಿ ಸಾರ್. ವರಾಹಮೂರ್ತಿನೂ ನನ್ ಜೊತೆ ಅದಾರ. ಇಬ್ರೂ ಹೊಳೆ ದಂಡೆಗೇ ಕುಂತೀವಿ. ಸರ್... ನೀವೇನಾರ ಹೇಳ್ರಿ... ಬೆಳದಿಂಗಳಾಗ ನದಿ ಬಗಲಾಗ ಕುಂದ್ರಾದು ಭಾಳ ಚಂದ ಅನಸಾಕತ್ಯಾದ.''

ಫೋನ್ ಡಿಸ್‌ಕನೆಕ್ಟ್ ಆಯ್ತು.

ಮ್‌... ಅಂತೂ ವಿರುಪಾಪುರ ಗಡ್ಡಿ ಸೇರಿಕೆಂಡಾಳ ಅನುಕಂಡ ರೆಡ್ಡಿ. ಇವ್ಳು ತುರಕಟ್ಟಿಗೆ ಹೋಗಿದ್ಲೋ... ಇಲ್ಲೋ ಗೊತ್ತಾಗಲಿಲ್ಲ ಅನುಕಂತಿದ್ದಾಗ ಮತ್ತೆ ಅವಳ ಫೋನು ರಿಂಗಾಯಿತು.

''ಅನ್ನಂಗ ಹೇಳಾದು ಮರ್ತೋಯ್ತು ಸರ್. ರಾಯಚೂರು ಬಿಟ್ಟಮ್ಯಾಲೆ ತುರಕಟ್ಟಿಗೆ ಹೋಗಿದ್ದೆ. ಕಾಶಿಗೆ ಹೋಗ್ತೀನಂತ ಹೋದ ನಮ್ಮಪ್ಪ ವಾಪಸ್ ಬಂದೆ ಇಲ್ಲಂತ ಸರ್. ಆತನ ಚಿಂತ್ಯಾಗ ನಮ್ಮಮ್ಮ ಆರು ತಿಂಗಳ ಕೆಳಗೇ ಸತ್ತೋದ್ಲಂತ. ಊರವರೆಲ್ಲ ಸೇರಿ ಮಣ್ಣು ಮಾಡಿದ್ರಂತ...''

ಫೋನ್ ಮತ್ತೆ ಕಟ್ಟಾಯಿತು. ಈ ಇರುಪಾಪುರ ಗಡ್ಯಾಗ ಸಿಗ್ನಲ್ ಬುಟ್ಟು ಬುಟ್ಟು ಸಿಗ್ತದ ಅನುಕಂಡ ರೆಡ್ಡಿ.

ಅಷ್ಟರಲ್ಲೇ ಫೋನು ಮತ್ತೆ ರಿಂಗಾಯಿತು.